Regd No. M 1299 34 th Year ತಾ|| 28—3—51

SATYAVADI

ಸಂಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಅಸತ್ಯವಂತರ ಕಳ್ಳಪೇಟಿಗರ ಸಂಸ್ಥೆ ಇಂದಿನ ಕಾಂಗ್ರೆಸ್!

ರೆಡ್ಡಿಗಳಿಗೆ ಅನಾರೋಗ್ಯ

ಮೈಸೂರು ಮುಖ್ಯಮಂತ್ರಿಗಳಿಗೆ ಅನಾರೋಗ್ಯ. ಅದ್ದರಿಂದ ಬೆಂಗಳೂರಿನಲ್ಲಿ ನಡೆಯುತ್ತಿರುವ ಶಾಸನ ಸಭೆಗೆ ಅವರು ನಿನ್ನೆ ಹೋಗಲಿಲ್ಲ.

ಇನ್ನೂ ಯೋಚನೆಯೆಲ್ಲಿದೆ

ನಗರ ಪೌರಸಭೆ ವರ್ಗಕ್ಕೆ ಕೆ. ಜಿ. ಎಫ್. ಸ್ಯಾನಿಟರಿ ಸಮಿತಿಯನ್ನ ಸೇರಿಸುವ ಅಂಶ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಬೆಂಗಳೂರು ವಾರ್ತೆ.

ಮದುವಣ್ಣಿತ್ತಿಗೆ ಉಚ್ಚಾಟನೆ

ಕಾಶಿ ಎಂಬವಳನ್ನು ಜಂಬೂಸಾರಿನಿಂದ ಹೊರಕ್ಕೆ ತಳ್ಳಲಾಗಿದೆ ಹೆಸರನ್ನು ಬದಲಾವಣೆ ಮಾಡ್ಕೊಂಡು, ಮಾಡ್ಕೊಂಡು ಅವಳು ಅನೇಕ ಮಂದಿಗೆ ನುಡಿದು ಆಗುತ್ತಿದ್ದಳು!

ಅರಳಿ ಬೆಳೆಯೋ ಪ್ರದೇಶ

920000 ಎಕರೆಯಷ್ಟು ಭೂಮಿಯನ್ನ ಈ ಬಾರಿ ಅರಳಿ ಬೆಳೆಗಾಗಿ ಭಾರತದಲ್ಲಿ ಉಪಯೋಗಿಸಲಾಗಿದೆ.

ಅಣು ಬಾಂಬು ಎಸೆಯಬೇಡಿ

ಪಾಕಿಸ್ಥಾನ ಸರ್ಕಾರಕ್ಕೆ ರಾವಲ್ಪಿಂಡಿಯ ಅರ್ಧ ಸೂರು ನಾಯಕರು ಮನವಿ ಅರ್ಪಿಸಿ ಸಂಭಾವ್ಯ ಬಾಂಬು ಪ್ರಯೋಗವನ್ನು ಅನೇರಿಕಾ ಸಮುದಲ್ಲಿ ಮಾಡದಂತೆ ವರ್ಜಸ್ಸು ಬೀರಬೇಕೆಂದು ಪ್ರಾರ್ಥಿಸಿದ್ದಾರೆ.

ಒಂದು ಲಕ್ಷ ಟ್ಟ ಹೆಚ್ಚು ಕಾಳು

ಮದಂತಪ ಪ್ರಾಂತ್ಯಕ್ಕೆ 5 ಲಕ್ಷ ಟನ್ ಧಾನ್ಯದ ಜೊತೆಗೆ 1 ಲಕ್ಷ ಟ್ಟ ಹೆಚ್ಚು ಧಾನ್ಯ ಕೊಡಲು ಭಾರತ ಸರ್ಕಾರ ನಿಗದಿ ಮಾಡಿದೆಯೆಂದು ಗೊತ್ತಾಗಿದೆ ಕಿತ್ತಿ ಪಡಿತರ ಹೆಚ್ಚಬಹುದು.

ಕಾಂಗ್ರೆಸ್ ರಾಜ್ಯಭಾರದಲ್ಲಿ ಶ್ರೀಮಂತರು ಶ್ರೀಮಂತರಾಗುತ್ತಲೇ ಇರುವರು, ಬಡವರು ಬಡವರಾಗುತ್ತಲೇ ಇದ್ದಾರೆ – ಎಂದು ರೈತ ಕಾರ್ಮಿಕ ಪಕ್ಷದ ಕಾರ್ಯದರ್ಶಿ ಶ್ರೀ ಪಿ ಸಿ ಘೋಷ್ ಹೌರಾದಲ್ಲಿ ತಿಳಿಸಿದ್ದಾರೆ. ಇಂದಿನ ಕಾಂಗ್ರೆಸ್ ಸಂಸ್ಥೆ ಅಸತ್ಯವಂತರಿಂದ ಕಳ್ಳಪೇಟಿಗರಿಂದ ಮತ್ತು ಪರ್ಮಿಟ್ ಮತ್ತು ಲೈಸೆನ್ಸ್ ಅಪೇಕ್ಷಿಸುವವರಿಂದ ಸೇರಿದೆ – ಎಂದರು

ಮರಣ!

ಸೂಲಿನ ಅಭಾವದಿಂದ ಪ್ರಾಪ್ತವಾದ ನಿರುದ್ಯೋಗದ ದೆಸೆಯಿಂದ ಅನ್ನವಿಲ್ಲದೆ ಕ್ರಿಷ್ಣದಲ್ಲಿ ಇಬ್ಬರು ಸತ್ತಿರುವುದು ನಿಗದಿಯಾಯಿತು

ಉಪವಾಸ ಬಂದಿಗಳು

ಆಲಿಪ್ಪಿ ಕಾರಾಗೃಹದಲ್ಲಿ ಕೆಲ ಬಂದಿಗಳು ಆರು ದಿವಸಗಳಿಂದ ಉಪವಾಸ ಮಾಡುತ್ತಿರುವುದಾಗಿ ತಿರುವೇಂದ್ರಂ ವಾರ್ತೆ

ಕಮ್ಯುನಿಸ್ಟರು ತಣ್ಣಗಾಗಿಲ್ಲ

ಕಮ್ಯುನಿಸ್ಟರು ಮಣಿಪುರದಲ್ಲಿ ಇನ್ನೂ ಗಲಭೆ ಮಾಡುತ್ತಿರುವರು ಎಂಬುದಾಗಿ ಶ್ರೀ ಕೆ. ಸಂತಾನಂ ದೆಹಲಿ ಪಾರ್ಲಿಮೆಂಟ್ನಲ್ಲಿ ತಿಳಿಸಿದ್ದಾರೆ.

× ದಲಾಯಿ ಲಾಮ ನೇಪಾಳಕ್ಕೆ ಭೇಟಿ ಕೊಡುವರು.

× 3ನೆ ದ್ವಂದ್ವದಲ್ಲಿ ಚೀನ ಕಮ್ಯುನಿಸ್ಟರು ಭದ್ರತೆ ಪ್ರಯತ್ನದಲ್ಲಿದ್ದಾರೆ

× ಶ್ರೀಮತಿ ಶಾನೋದೇವಿ ಪಂಜಾಬ ಶಾಸನ ಸಭೆ ಉಪಾಧ್ಯಕ್ಷರಾದರು.

× ಹೈದರಾಬ್ದನ್ನಲ್ಲಿ ಕಮ್ಯುನಿಸ್ಟರು 2 ಪೋಲೀಸರನ್ನು ಕೊಂದರು.

ಏಪ್ರಿಲ್ ತಿಂಗಳಿನಿಂದ ಅರಿವೆ ಸಲೀಸಾಗಿ ದೊರೆಯುವುದು

ದಿವ್ಯ ವಾಣಿ

ಪರರಿಗೆ ಹಾನಿ ಮಾಡುವವನು
ತನಗೆ ತಾನೇ ಘೋರ ಹಾನಿ ಮಾಡಿ
ಕೊಳ್ಳುತ್ತಾನೆ

ಇತರರಿಗೆ ನೆರವಾಗುವೆವು
ತನಗೆ ತಾನೇ ತುಂಬ ನೆರವಾಗುತ್ತಾನೆ

ನಾನು, ನನ್ನದು ಎಂಬ ಮಾಯೆ
ನಿಮ್ಮ ಮನಸ್ಸಿನಿಂದ ಹೊರಯಾಗಲಿ
ನಿಮ್ಮ ದಾರಿ ನಿಮಗೆ ಸುಗಮವಾಗುವುದು
ನಿಮ್ಮ ದಾರಿ ನಿಮಗೆ ಸ್ಪಷ್ಟವಾಗುವುದು.

— ಶ್ರವಣ

ಆಜಾದರ ಹೇಳ್ಕೆಗೆ ಪ್ರತಿಭಟನೆ

ಉತ್ತರ ಪ್ರದೇಶದ ವಿದ್ಯಾ ಮಂತ್ರಿ ಶ್ರೀ ಸಂಪೂರ್ಣಾನಂದರು ಕೇಂದ್ರ ವಿದ್ಯಾ ಮಂತ್ರಿ ಶ್ರೀ ಮೌಲಾನಾ ಅಬುಲ ಕಲಂ ಆಜಾದರು ಹಿಂದಿ ಬಗ್ಗೆ ಇತ್ತೀಚೆಗೆ ಆಡಿಕೆಯನ್ನು ಪ್ರತಿಭಟಿಸಿದ್ದಾರೆ. ಕೇಂದ್ರ ಮಂತ್ರಿಗಳು ಅಖಿಲ ಭಾರತ ಹಿಂದಿ ಪರಿಷತ್ನಲ್ಲಿ ಹಿಂದಿ ಈಗಿನ ಭಾಷೆ ಎಂದಿದ್ದರು.

ವನಮಹೋತ್ಸವ

ಈ ವರ್ಷ ಜುಲೈ ತಿಂಗಳಿನಲ್ಲಿಯೂ ಸಹ ಕಳೆದ ವರ್ಷದಂತೆಯೆ ಇಡೀ ಭಾರತದಲ್ಲಿ ವನಮಹೋತ್ಸವ ಮಾಡಲು ದೆಹಲಿ ಸರ್ಕಾರ ನಿರ್ಧರಿಸಿದೆ. ಕಳೆದ ವನಮಹೋತ್ಸವ ಫಲಿತಾಂಶ ಹೇಗಿದ್ಯೊ

ಬಟ್ಟೆ ಸಿಕ್ಕುತ್ತೆ

ಮುಂದಿನ ತಿಂಗಳಿಂದ ಬಟ್ಟೆ ದೊರೆಯೋದರ ತಾಪತ್ರಯವಷ್ಟಾಗಿ ನೀಡೆಂದೂ ಬಟ್ಟೆ ಸಲೀಸಾಗಿ ಸಿಕ್ಕುವದೆಂದೂ ಬೆಂಗಳೂರಿನಿಂದ ಗೊತ್ತಾಗಿದೆ. ಜೊತೆಗೆ ಪಡಿತರ ಹೆಚ್ಚಿಸುತ್ತಾರೆಂದು ಕೇಳುತ್ತಿರೋದು ಜನರ ಮನಸ್ಸಿನಲ್ಲಿ ಸ್ವಲ್ಪ ನೆಮ್ಮದಿ ತರ್ತಿದೆ.

ದಾಸಪ್ಪನೋರಿಗೆ ಅರ್ಥವ್ಯವಾಗಿಲ್ಲವಂತೆ!

ಹೋದ ಬಾರಿ ಮುಂಗಡಪತ್ರ ಸಾಮಾನ್ಯ ಹೊಗಳಿದ ಶ್ರೀ ತಾಳಿಕೆರೆ ಸುಬ್ರಹ್ಮಣ್ಯ ಮೆತ್ತು ಶ್ರೀ ಎ ಜಿ. ರಾಮಚಂದ್ರರಾಯರು ಈ ಬಾರಿ ಅದೇಕೆ ಅಷ್ಟು ಉಗ್ರವಾಗಿ ಟೀಕಿಸಿ ಸರ್ಕಾರದಲ್ಲಿ ದಕ್ಷತೆ ಕೆಳಗಿಳಿದಿದೆಯೆಂದು ಏಕೆ ಸುಡಿದರೋ ನಾ ಕಾಣೆ – ಎಂದಿದ್ದಾರೆ ಸಚಿವ ಶ್ರೀ ದಾಸಪ್ಪನವರು ಬೆಂಗಳೂರಿನಲ್ಲಿ.

ಹೌರಾ ಆಯ್ಕೆ ಫಲಿತಾಂಶ

ನೊನ್ನೆ ಹೌರಾದಲ್ಲಿ ನಡೆದ ಪೌರಸಭೆ ಚುನಾವಣೆಯ 5 ವಾರ್ಡುಗಳ ಫಲಿತಾಂತಗಳು ಪ್ರಕಟವಾದವು. ಕಾಂಗ್ರೆಸಿಗೆ ಹತ್ತು ಸ್ಥಾ, 3 ಸ್ಥಾನಗಳು ಸಮಾಜವಾದಿ ಎಪಸಕ್ಷಗಳಿಗೆ ಸಿಕ್ಕಿವೆ.

ಕೆಂಪವರನ್ನು ಓಡಿಸಬಹುದು

ಕಮ್ಯುನಿಸ್ಟರನ್ನು ಸೋಲಿಸಲು ಸಾಧ್ಯವಾಗುವದೆಂದು ಸಂಯುಕ್ತರಾಷ್ಟ್ರ ಸಂಸ್ಥೆಗೆ ಜನರಲ್ ಮೆಕಾರ್ಥರ್ ವರದಿ ಮಾಡಿದ್ದಾರೆಂದು ಲೇಕ್ ಸಕ್ಸಸ್ ವಾರ್ತೆ.

ಶಾಸನ ನಿರ್ಮಾಣಕರು ಕತ್ತಿ ಹಿಡ್ದು ಕ್ಷೌರ ಮಾಡಿದ್ರು!

ಹೇಂಡಾಜ್ ಪೋರ್ವಾಲ್ ಎಂಬವರು 25 ಮಂದಿ ಹರಿಜನರಿಗೆ ಕ್ಷೌರ ಮಾಡಿದ್ದಾ! ಎಂದು ಗ್ವಾಲಿಯರ್ ವಾರ್ತೆ. ಶೈಲ್ಲ ಎಂಬಲ್ಲಿ ಕ್ಷೌರಿಕರು ಹರಿಜನರಿಗೆ ಕ್ಷೌರ ಮಾಡಲೊಲ್ಲದೆ ಹೋದಾಗ ಪೋವರ್ಮಲರೆ ಕ್ಷೌರ ಮಾಡಿದರು. ಇವರು ಮಧ್ಯ ಭಾರತ ಶಾಸನ ಸಭೆ ಕಾಂಗ್ರೆಸ್ ಸಭ್ಯರು.

× 6/0 ಅಮೇರಿಕ ನೌಕೆಗಳನ್ನು ವಾಪಸು ಮಾಡಲ ರಷ್ಯ ನಿರಾಕರಿಸಿತೆಂದು ವಾಷಿಂಗ್ಟನ್ ವಾರ್ತೆ.

ಆಹಾರ ಸಮಸ್ಯೆಯ ನಿಜ ಸ್ವರೂಪ, (೨)

ಆಹಾರ ಪದಾರ್ಥಗಳು ಸಾಲದೇ ಹೋಗುತ್ತವೆ ಎಂದು ತಿಳಿದುಬಂದಾಗ "ಹೆಚ್ಚು ಆಹಾರ ಬೆಳೆಯಿರಿ" ಪ್ರಚಾರವನ್ನೂ ಕಾರ್ಯಕ್ರಮವನ್ನೂ ಸರಕಾರದವರು ಅನುಸರಿಸಿದರು. ಅದು ಸಾಧುವಾದುದು, ನ್ಯಾಯುವಾಗಿ ಮಾಡಬೇಕಾದ್ದನ್ನು ಮಾಡಿದರು. ಆಹಾರೋತ್ಪತ್ತಿಯನ್ನು ಹೆಚ್ಚಿಸಲು, ಸರಕಾರದವರು ಖಾಲಿ ಬಿದ್ದ ಜಮೀನುಗಳನ್ನು ಸರಿಯಾಗಿ ವ್ಯವಸಾಯ ಮಾಡಲು ಇಷ್ಟವುಳ್ಳವರಿಗೆ ಕೊಟ್ಟು ಆ ಮೂಲಕ ಆಹಾರೋತ್ಪನ್ನವನ್ನು ಹೆಚ್ಚಿಸಲು ಯತ್ನಿಸಬೇಕು. ಅದೊಂದು ಮುಖ್ಯ ಸಾಧನವು. ನಮ್ಮ ಸಂಸ್ಥಾನದ ಸರಕಾರದವರು ಕೊಂಚ ಮಟ್ಟಿಗೆ ಈ ದಾರಿಯಲ್ಲಿ ಪ್ರವೃತ್ತರಾಗಿರುವಂತೆ ಕಂಡುಬಂದಿದೆ; ಆದರೆ ಅತಿರಿಂದ ಸಾಧಿಸಿರುವ ಮಹಾಫಲವೇನು? ಎಂಬುದನ್ನು ನೋಡೋಣ.

ಹಿಂದೆ ಐದು ವರ್ಷಗಳಲ್ಲಿ ಇದ್ದುದಕ್ಕಿಂತಲೂ ಮೂರು ಲಕ್ಷ ಎಕರೆ ಜಮೀನು ಹೆಚ್ಚಾಗಿ ಹಿಡುವಳಿಯಾಗಿರುವುದು ಕಾಣುತ್ತೆ. ಇದು ಪ್ರಾಯಶಃ ' ಹೆಚ್ಚು ಆಹಾರ ಬೆಳೆಯಿರಿ ' ಕಾರ್ಯಕ್ರಮಕ್ಕೆ ಅನುಸಾರವಾಗಿ ಇರಬೇಕೆಂದು ಊಹಿಸಬಹುದು ; ಆದರೂ ಸಂಸ್ಥಾನದಲ್ಲಿ ಇನ್ನೂ 18 ಲಕ್ಷ ಎಕರೆ ಜಮೀನು ' ಬಂಜರು ' ಇರುತ್ತದೆ ; ಅದನ್ನೇಕೆ ಯಾರಿಗೂ ಕೊಡಲಿಲ್ಲ ? ಯಾರೂ ಅದನ್ನು ಕೇಳಲಿಲ್ಲವೇ ? ಸರಿಯಾದ ಜನಗಳು ಸಿಕ್ಕಲಿಲ್ಲವೇ ? ಅಥವಾ ೧೮ ಹದಿನೆಂಟು ಲಕ್ಷ ಎಕರೆ ಜಮೀನು ಬಂಜರಾಗಿಯೇ ಉಳಿಯಲೆಂದು ನಿರ್ಧರಿಸಿದೆಯೆ ? ಇರಲಿ ; ಮೂರು ಲಕ್ಷ ಎಕರೆಯಷ್ಟಾದರೂ ಹೆಚ್ಚಾಗಿ ಹಿಡುವಳಿಯಾದುದು ಸಂತೋಷವು.

ಹಿಡುವಳಿಯಾದ ಜಮೀನು ಸಾಗುವಳಿಯಾಗುವಂತೆ, ಅದರಲ್ಲಿಯೂ ಈ ಆಹಾರಾಭಾವದ ಕಾಲದಲ್ಲಿ, ಸರಕಾರದವರು ಸರಿಯಾಗಿ ನೋಡಿಕೊಳ್ಳಬೇಕಾದದ್ದು ಅಗತ್ಯವು ; ಐದು ವರ್ಷಗಳ ಹಿಂದೆ ಅರವತ್ತೇಳೂಕಾಲು ಲಕ್ಷ ಎಕರೆ ಜಮೀನು ಸಾಗುವಳಿಯಾಗಿತ್ತು ; ಕಳೆದ ವರ್ಷ ಹೆಚ್ಚಿಗೆ ಹಿಡುವಳಿಯಾದ ಮೂರು ಲಕ್ಷ ಎಕರೆ ಸೇರಿ ಅರವತ್ತನಾಲ್ಕು ಲಕ್ಷ ಎಕರೆ ಜಮೀನು ಮಾತ್ರ ಸಾಗುವಳಿಯಾಗಿದೆ ; ಮೂರು ಲಕ್ಷ ಎಕರೆ ಜಮೀನು ಹೆಚ್ಚು ಸಾಗುವಳಿಯಾಗಬೇಕಾದುದರ ಬದಲಿಗೆ ಎಳೂಕಾಲು ಲಕ್ಷ ಎಕರೆ ಜಮೀನು ಕಡಮೆ ಸಾಗುವಳಿಯಾಗಿದೆ. ' ಹೆಚ್ಚು ಆಹಾರ ಬೆಳೆಯಿರಿ ' ಕಾರ್ಯಕ್ರಮಕ್ಕೆ ಅನುಸಾರವಾಗಿ ಹೆಚ್ಚು ಸಾಗುವಳಿ ಮಾಡಿಸಿ, ಹೆಚ್ಚು ಬೆಳೆ ಸಿಗುವಂತೆ ಮಾಡುವುದು ಸರ್ಕಾರದ ಕರ್ತವ್ಯವಾಗಿದ್ದರೂ ಸಾಗುವಳಿಯಾಗುತ್ತಿದ್ದ ಜಮೀನಿನಲ್ಲಿಯೇ ಮೂರೂಕಾಲು ಲಕ್ಷ ಎಕರೆ ಜಮೀನು ಸಾಗುವಳಿಯೇ ಆಗಲಿಲ್ಲವೆಂಬುದು ಈಗಿನ ಕಾಲದಲ್ಲಿ ಉದಾಸೀನ ಮಾಡತಕ್ಕ ವಿಷಯವಲ್ಲ : ಅದರಲ್ಲಿಯೂ ಸರಕಾರದವರು ಹೆಚ್ಚು ಆಹಾರಕ್ಕಾಗಿ ಸುಮಾರು ಹನ್ನೆರಡು ಕೋಟಿ ರೂಪಾಯಿಗಳಷ್ಟನ್ನು ಖರ್ಚು ಮಾಡಿ ಕೃಷ್ಣರಾಜ ಸಾಗರದಂಥಾ ಜಲಾಶಯವನ್ನೇ ಬತ್ತಿಸಿ ಎಳೂಕಾಲು ಲಕ್ಷ ಎಕರೆ ಜಮೀನು ಬಂಜರು ಇರುವುದನ್ನು ಸಹನೆ ಮಾಡಿರುವುದು ಅಕ್ಷಮ್ಯವು.

[ಮುಂದುವರಿಯುವುದು

ಉಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ವನಸುಂದರಿ ❁ Vanasundari

ಪಿ. ಯು. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಬಾಲಯ್ಯ ಪುಳಿಮೂಟೆ
ಕೃಷ್ಣ, ಮಧುರಂ, ಲಲಿತ, ಪದ್ಮಿನಿ ಅಭಿನಯಿಸಿರುವರು

ಅಮೋಘ ತಮಿಳು ಚಿತ್ರ — ಪ್ರತಿದಿನ 3 ಆಟಗಳು ; ಮ್ಯಾಟಿನಿ 3 ಗಂಟೆಗೆ

— ಬೆಳಗಿನ ಪ್ರದರ್ಶನ — 30—4—51 ರಿಂದ — 3 ದಿನಗಳು

" ಅಡ್ವೆಂಚರ್ಸ್ ಆಫ್ ಕ್ಯಾಪ್ಟನ್ ಮಾರ್ವೆಲ್ " (ರಿಪಬ್ಲಿಕ್ ಸೀರಿಯಲ್)

ರಣಜಿತ್ ಕೀರ್ತಿಯುತ 4 ನೇ ವಾರ

ನರ್ಗಿಸ್, ದಿಲೀಪ್‌ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ

BABUL ❁ ಬಾಬುಲ್

ಅಮೋಘ ಹಿಂದಿ ಚಿತ್ರ — — ಪ್ರತಿದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 30—4—51 ರಿಂದ 3 ದಿವಸಗಳು

" ಡೆಡ್ " (ಹಿಂದಿ) ಪಾತ್ರ— ಮನ್ವರ್ ಸುಲ್ತಾನ್, ಸೂರೈಯ

Edited, Printed and Published by M. S. Krishna Rao. at the Satyavadi Press Chamrajpuram Mysore

" ಗೋರಕ್ಷಣ "

ಪ್ರತಿ ತಿಂಗಳ ತಾ|| 1 ರಲ್ಲಿ ಪ್ರಕಟವಾಗುವ ' ಗೋರಕ್ಷಣ ' ದಲ್ಲಿ ಗೋರಕ್ಷಣೆ, ಪಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ : ' ಗೋರಕ್ಷಣ ' ಸತ್ಯವಾದಿ ಆಫೀಸ್, ಮೈಸೂರು

Announcement

Theatre building old materials and furniture are being sold very cheap

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಕೋರಿಯಾದಲ್ಲಿ ಕಮ್ಯುನಿಸ್ಟು ಆಕ್ರಮಣ ತಡೆಯುತ್ತಿರುವ ವಿಶ್ವಸಂಸ್ಥೆ ಪಡೆ